ಕೊಲೆಯಂಥದ್ದನ್ನು ನಿರಾಕರಿಸಬಹುದೆಂದು. ದುಡ್ಡಿಗೆ ಅಪಹರಣವಾಗಿದ್ದಲ್ಲಿ ಇಷ್ಟರಲ್ಲೇ ಸೂಚನೆ ಖಚಿತವಾಗಿ ಬರುತ್ತಿತ್ತು. ಅಲ್ಲಿಗೆ ಕಾವ್ಯ ಸ್ವಯಂ ಪ್ರೇರಣೆಯಿಂದ ಹೋಗಿದ್ದಳೇ?. ಯಾರದೋ ಮೋಹಕ್ಕೆ ಸಿಲುಕಿದಳೇ? ಹಲವಾರು ಬಾರಿ ಈ ಯೋಚನೆ ನನ್ನ ಆತ್ಮವಿಶ್ವಾಸವನ್ನು ನುಚ್ಚುನೂರು ಮಾಡುತ್ತಿತ್ತು. ಐದು ವರ್ಷಗಳ ಹಾಲುಜೇನಿನಂತಹ ಸಮರಸವಿದ್ದ ನಮ್ಮೀ ಬಾಳಿನಲ್ಲಿ ಒಬ್ಬರಿಗೊಬ್ಬರು ದ್ರೋಹ ಬಗೆಯುವುದು ಸಾಧ್ಯವೇ ಎಂಬುದೇ ಯಕ್ಷಪ್ರಶ್ನೆ?

ನನ್ನ ಹೊರತು ಬೇರೆಯವರೆಲ್ಲಾ ಕಾವ್ಯ ಯಾರೋ ಪ್ರೇಮಿಯ ಜೊತೆ ಓಡಿ ಹೋಗಿದ್ದಾಳೆಂದು ಆಗಲೇ ತೀರ್ಪು ಕೊಟ್ಟಂತಿತ್ತು. ಐದು ವರ್ಷಗಳ ಕಾವ್ಯಳೊಂದಿಗಿನ ಒಡನಾಟ, ಸ್ನೇಹ ದಾಂಪತ್ಯ ಸುಖ, ಚರ್ಚೆ, ಮುನಿಸು ನೋವು ನಲಿವುಗಳನ್ನು ಮನಸ್ಸಿನಲ್ಲಿ ಪುನರಾವರ್ತಿಸಿ ವಿಶ್ಲೇಷಿಸತೊಡಗಿದೆ. ಯಾವುದಾದರೂ ಅಪಸ್ವರ, ಅಪಶ್ರುತಿ, ಅಪಭ್ರಂಶ ಕಾಣಸಿಗುವುದೇ ಎಂದು. ಮನೆಯಲ್ಲಿ ಕಾವ್ಯಳ ಪ್ರತಿ ವಸ್ತುಗಳು ನಮ್ಮ ಸರಸ, ಅನ್ಯೋನತೆ, ಅನುರಾಗ, ಪ್ರಣಯದ ಸುಖಾನುಭೂತಿಯನ್ನು ನೆನಪಿಸುತ್ತದೆಯೇ ವಿನಹ ದ್ರೋಹ ವಂಚನೆಗಳಿಗೆ ಎಡೆಯಿರಲಿಲ್ಲ.

ಮನೆಯ ಬಾಗಿಲು ಜೋರಾಗಿ ಬಡಿದ ಸದ್ದು. ಹೋಗಿ ತೆಗೆದಾಗ ಪೊಲೀಸ್ ಪೇದೆಯೊಬ್ಬ 'ಸಾಹೇಬರು ನಿಮ್ಮನ್ನ ತಕ್ಷಣ ಠಾಣೆಗೆ ಬರ ಹೇಳಿದ್ದಾರೆ' ಎಂದ. 'ಏನಾದರು ಸೂಚನೆ ಸಿಕ್ತಾ ಸಾರ್?'

'ಅಲ್ಲಿ ಹೋಗಿ ವಿಚಾರಿಸಿ'

ಠಾಣೆಯ ಒಳಹೊಕ್ಕಾಗ ರಾಕೇಶ್ ಹೊರ ಹೋಗುತ್ತಿದ್ದು ಕಾಣಿಸಿತು, ನನ್ನ ಕಂಡೂ ಗಮನಿಸದಿದ್ದಂತೆ. ಇನ್ಸ್‌ಪೆಕ್ಟರ್ 'ನೋಡಿ ಪಂಕಜ್, ಈಗ ನಿಮ್ಮ ಮಾವನ ಮನೆಯವರು ನಿಮ್ಮ ಬಗ್ಗೆ ಶಂಕೆಯಿದೆ. ನೀವೇ ನಿಮ್ಮ ಹೆಂಡತಿನ ಮುಗಿಸಿರ ಬಹುದು. ತನಿಖೆ ಮಾಡಿ ಅಂಥಾ ದೂರು ಕೊಟ್ಟಿದ್ದಾರೆ' ಎಂದರು. ನನಗೇ ದಿಕ್ಕೇ ತೋಚದಂತಾಯ್ತು, ಕಾಲುಗಳಲ್ಲಿ ನಿಶ್ಶಕ್ತಿ ಕಾಣಿಸಿತು.

'ನಾನೇಕೆ ಮಾಡಲಿ ಸಾರ್ ನಾವು ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತಿದ್ದೆವು'. 'ಅದೆಲ್ಲಾ ಸರಿ ಮಿಸ್ಟರ್, ಎಲ್ಲರೂ ಹೇಳೋದೆ ಹಾಗೇ. ನಾವು ದಿನ ಬೆಳಗಾದರೆ ಈ ರೀತಿ ಕೇಸ್‌ಗಳನ್ನು ನೋಡ್ತಿರ್ತೀವಿ. ಸದ್ಯಕ್ಕೆ ಕ್ರಮವೇನು ತೊಗೋತಿಲ್ಲ. ಆದರೆ ನೀವು ಊರು ಬಿಟ್ಟು ಎಲ್ಲೂ ಹೋಗಬಾರದು. ಕರೆದಾಗ ಠಾಣೆಗೆ ಬರಬೇಕು ಈಗ ಹೋಗಿ..'

ಮನೆಗೆ ಬಂದು ದೊಪ್ಪನೆ ಹಾಸಿಗೆಯಲ್ಲಿ ಕುಸಿದೆ. ವಿಷಯ ತಿಳಿದು ಅಮ್ಮ ಬೀಗರಿಗೆ ಹಿಡಿಶಾಪ ಹಾಕಿದಳು. ಎಷ್ಟು ಹೊತ್ತು ಹಾಗೇ ಮಲಗಿದ್ದನೋ ಪ್ರಕಾಶ್ ಕರೆ ಬಂತು 'ಠಾಣೆಯ ಪೇದೆಯೊಬ್ಬ ಕರೆ ಮಾಡಿದ್ದ. 'ನಿನ್ನ ಮೇಲಿನ ದೂರಿನ ಬಗ್ಗೆ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಇಪ್ಪತ್ತು ಸಾವಿರ ಕೇಳ್ತಿದ್ದಾನೆ'. 'ನೋಡು ಪ್ರಕಾಶ್ ದುಡ್ಡು ಕೊಟ್ಟರೆ ನಾನೇನೋ ಅಪರಾಧ ಮಾಡಿದ್ದೀನಿ ಅಂಥಾಗತ್ತೆ. ಏನು ಬರುತ್ತೊ ಎದುರಿಸಿದರಾಯ್ತು'. ಸಾಕಷ್ಟು ಹೊತ್ತು ಪ್ರಕಾಶ್ 'ದುಡ್ಡು ಬಿಸಾಕಿ ಶ್ರಮ ಅವಮಾನದಿಂದ ಬಚಾವಾಗೋದೇ ಲೇಸು' ಎಂದು ನನ್ನ ಒಪ್ಪಿಸಲು ವೃಥಾ ಪ್ರಯತ್ನಿಸಿದ.

ಸುಮಾರು ಹತ್ತುಗಂಟೆಗೆ, ಕರೆ ಕಳುಹಿಸಿದರಿಂದ ಠಾಣೆಗೆ ಬಂದೆ. ಹಿಂದೆ ಮುಂದೆ ನೋಡದೆ ಲಾಕಪ್‌ಗೆ ತಳ್ಳಿ ಬೀಗ ಜಡಿದರು. ನನ್ನ ಪ್ರತಿಭಟನೆಗೆ ಬಿಡಿಕಾಸು ಬೆಲೆ ಕೊಡದೆ ನನ್ನ ಸೆಲ್ ತಮ್ಮ ವಶಕ್ಕೆ ತೆಗೆದುಕೊಂಡರು. ವಾರೆಂಟ್ ಕೇಳಿದ್ದಕ್ಕೆ ಎಲ್ಲಾ ಬೆಳಗ್ಗೆ ಸಿಗುತ್ತೆ ಎಂಬ ವ್ಯಂಗ ಬಂತು. ನನ್ನ ಸ್ಥಿತಿಯ ಬಗ್ಗೆ ಜಿಗುಪ್ಸೆ ಮೂಡಿತು. ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆಯಲು ಪ್ರಯತ್ನಿಸಿ ಹತಾಶನಾಗುತ್ತಿದ್ದೆ. ಮುಂದೇನೆಂದು ತೋಚದೆ ನೆಲದ ಮೇಲೆ ಕುಸಿದು ಗೋಡೆ ಗೊರಗಿದೆ. ಆಮಂತ್ರಣ ನೀಡಿ ಬರಹೇಳಿದಂತೆ ಸೊಳ್ಳೆಗಳ ಮಹಾಪೂರ ನನ್ನ ಮೇಲೆ ದಾಳಿ ಮಾಡಿದವು. ಆಯಾಸ, ದುಗುಡದಲ್ಲಿ ಯಾವಾಗ ಜೊಂಪು ಆವರಿಸಿತೋ ತಿಳಿಯದು.

ನನ್ನೆದೆಗೇನೊ ಒರಗಿದ ಹಾಗಾಯ್ತು, ಗಾಬರಿಯಿಂದ ಕಣ್ಣು ಬಿಡುವುದಕ್ಕೆ ಮುಂಚೆ. ಯಾಂತ್ರಿಕವಾಗಿ ಕೈಯನ್ನು ರಕ್ಷಣಾತ್ಮಕವಾಗಿ ಮುಂದೆ ತಂದಾಗ, ಕೈಗಳಿಗೆ ನೀಳ ಜಡೆಯ ಸ್ಪರ್ಶಾನುಭವವಾಯ್ತು. ತೆರೆದ ಕಣ್ಣುಗಳು ಕಂಡಿದ್ದನ್ನು ನಂಬಲೋ ಬೇಡವೋ ಎನ್ನುವ ಇಬ್ಬಂದಿಯಲ್ಲಿ ಸಿಲುಕಿತು. ಬಿಕ್ಕಿಬಿಕ್ಕಿ ಅಳುತ್ತಾ ನನ್ನೆದೆಯನ್ನು ತೋಯಿಸುತ್ತಿದ್ದ ಮಡದಿಯನ್ನು ಕಂಡು ಕನಸೋ ನನಸೋ ಎನ್ನುವ ಪ್ರಶ್ನೆ ಏಳುತ್ತಿದ್ದಾಗ, ಕಾವ್ಯ ತಲೆಯೆತ್ತಿ 'ನನ್ನ ಕ್ಷಮಿಸಿ, ಏನೋ ಮಾಡಕ್ಕೆ ಹೋಗಿ ಎಡವಟ್ಟಾಯ್ತು'. ಲಾಕಪ್‌ನ ಹೊರಗಡೆ ನಿಂತಿದ್ದ ಕಾವ್ಯಳ ದೂರದ ಸಂಬಂಧಿ, ಶಾಂತಕ್ಕ ಮತ್ತು ಭಾವನನ್ನು ಕಂಡು ಮತ್ತಷ್ಟು ಗೊಂದಲಕ್ಕೀಡಾದೆ.

ಠಾಣೆಯ ಔಪಚಾರಿಕತೆಯನ್ನು ಮುಗಿಸಿ ಹೊರಬಂದಾಗ, ಉದಯಿಸುತ್ತಿದ್ದ ಸೂರ್ಯನ ಕೆಂಗಿರಣಗಳೊಂದಿಗೆ ಮುಂಜಾನೆಯ ತಿಳಿಗಾಳಿ ಬೀಸುತ್ತಿತ್ತು. ಬೈಕ್‌ನಲ್ಲಿ ನನ್ನ ಹಿಂದೆ ಬಿಕ್ಕಳಿಸುತ್ತಲೇ ತಬ್ಬಿಹಿಡಿದಿದ್ದ ಕಾವ್ಯಳ ಹಿಡಿತದಲ್ಲಿ ಅಧೀರತೆ ವೇದ್ಯವಾಗುತ್ತಿತ್ತು. ಶಾಂತಕ್ಕ ಭಾವ ಕಾರಿನಲ್ಲಿ ಹಿಂಬಾಲಿಸಿದರು. ಮನೆಯ ಬಾಗಿಲು ತೆರೆದು ಅಮ್ಮ ಕಾವ್ಯಳನ್ನುದ್ದೇಶಿಸಿ 'ಗಂಡ, ಮನೇನ ಬಿಟ್ಟು, ನಮ್ಮ ಮಾನವೆಲ್ಲಾ ಹರಾಜ್ ಹಾಕಿ ಎಲ್ಲಿ ಹೊರಟುಹೋಗಿದ್ದೀ. ಸ್ವಲ್ಪನೂ ಜವಾಬ್ದಾರಿಯಿಲ್ಲವೇ?'.

ಶಾಂತಕ್ಕ ಉತ್ತರಿಸಿದರು 'ನಮ್ಮ ಮನೇಲಿದ್ದಳು...'. ಅಮ್ಮ ಶಾಂತಕ್ಕನ ತಡೆದು 'ಅವಳಿಗೇನೊ ಬುದ್ಧಿಯಿಲ್ಲವೆಂದರೆ ನಿಮಗೂ ಜವಾಬ್ದಾರಿ ಬೇಡವೇನಮ್ಮ ಎರಡೆರಡು ಹೆಣ್ಮಕ್ಕಳ ಮದುವೆ ಮಾಡಿದವರು.. ಮನೆ ಮಠ ಬಿಟ್ಟುಬಂದವಳನ್ನ ಕೂಡಿಸಿಕೊಂಡೇನು ಮಾಡ್ತಿದ್ದೀರಿ? ನನ್ನ ಮಗನ್ನ ಲಾಕಪ್‌ಗೆ ದಬ್ಬೀ..' ಅಮ್ಮನ ಕೋಪ ತಾರಕದಲ್ಲಿತ್ತು. ತಕ್ಷಣ ಕಾವ್ಯ ಅಮ್ಮನ ಪಾದಗಳಿಗೆರಗಿ 'ತುಂಬಾ ತಪ್ಪಾಯ್ತು ಅಮ್ಮ, ನಿಮಗೆಲ್ಲರಿಗೂ ಆತಂಕ ಮಾಡ್ಬಿಬಿಟ್ಟೆ.. ನನ್ನ ಕ್ಷಮಿಸಿ' ಎಂದು ರೋದಿಸತೊಡಗಿದಳು.

'ಕ್ಷಮಿಸ ಬೇಕಾದವನು ನಿನ್ನ ಗಂಡ.. ಏನು ವಿಷಯಾಂತ ಅವನಿಗೆ ಹೇಳಿದೆಯಾ?'. ಕಾವ್ಯ ನಾನಿದ್ದಲ್ಲಿಗೆ ಸಮೀಪಿಸಿ, ಬಿಕ್ಕಳಿಸುತ್ತಲೇ 'ರೂಪನ ಮಗುವಿನ ನಾಮಕರಣದಿಂದ ನಾನೂ ಶಾಂತಕ್ಕ ಪ್ರಸಿದ್ಧ ಜ್ಯೋತಿಷಿ ಚಂದ್ರಕಾಂತ ಪಂಡಿತ್ ಬಳಿ ಹೋದೆವು, ನಮ್ಮ ಸಂತಾನ ಯೋಗದ ಬಗ್ಗೆ ವಿಚಾರಿಸಲೆಂದು. ನಮ್ಮಿಬ್ಬರ ದಾಂಪತ್ಯಕ್ಕೆ ಇದೇ ಐದು ದಿನದ ಪಂಚಮ ಕಂಟಕವಿದೆಯೆಂದೂ, ನಮ್ಮಲ್ಲಿ ಯಾವುದೇ ರೀತಿಯ ಸಂಪರ್ಕವಾದರೂ, ಮಾತು, ನೋಟ, ಸಂಭಾಷಣೆ ಅಥವಾ ಸ್ಪರ್ಶವಾದರಂತೂ ನಿಮ್ಮ ಪ್ರಾಣಕ್ಕೇ ಹಾನಿಯೆಂದು ಹೇಳಿದರು. ನಿವಾರಿಸಲು ಹೋಮ, ಬಲಿ ಪೂಜೆಯಿದೆಯಂತೆ. ಖರ್ಚು ಎರಡು ಮೂರು ಲಕ್ಷ ರೂಪಾಯಿಗಳಿಗೂ ಹೆಚ್ಚಾಗುತ್ತೆ ಅಂಥ ತಿಳೀತು. ಹೋಮ ಬಲಿ ಮಾಡಿಸಿಯೂ, ಜೊತೆಯಲ್ಲಿದ್ದರೇ ನಿಮಗೇನಾದರೂ ಅಪಾಯವಾದರೆ ಎಂಬ ಭಯದಿಂದ ನಾನು ತಲೆಮರೆಸಿಕೊಂಡಿರಲು ನಿಶ್ಚಯಿಸಿ ಐದೂ ದಿನ ಶಾಂತಕ್ಕನ ಮನೆಯಲ್ಲಿ ತಂಗಿದ್ದೆ. ಭಾವ ನಿಮಗೆ ತಿಳಿಸಬೇಕೆಂದು ಅನೇಕ ಬಾರಿ ಸೂಚಿಸಿದರು. ಆದರೆ ನೀವು ಇವೆಲ್ಲ ನಂಬಲ್ಲ, ಹಾಸ್ಯ ತಮಾಷೆ ಮಾಡಿ ನನ್ನನ್ನು ಸಂಪರ್ಕಿಸಿದರೆ ಗತಿಯೇನೆಂದು ಹೆದರಿ ನಾನೇ ಒಪ್ಪಿಕೊಳ್ಳಲಿಲ್ಲ. ನಿಮಗೆ ಕಿಂಚಿಷ್ಟೂ ಅಪಾಯ ವಾಗುವುದು ಸಹಿಸಲಾರೆ. ಹೇಗಿದ್ದರೂ ಐದೇದಿನ ತಾನೆ ಕಳೆದುಹೋಗತ್ತೆ, ಸದ್ಯ ನಿಮಗೇನು ಕಂಟಕವಾಗದಿರಲಿ ಅನ್ನೋದೊಂದೇ ನನ್ನ ಧ್ಯೇಯವಾಗಿತ್ತು. ಪಂಚಮ ಕಂಟಕದ ಭಯ ನನ್ನ ಸಾಮಾನ್ಯ ವಿವೇಚನೆಯನ್ನೂ ಮಂಕು ಮಾಡಿತ್ತು ಅಂಥ ಈಗ ಅರಿವಾಗ್ತಿದೆ. ಮಾವ ರಾಕೇಶನ ಉದ್ಧಟತನವಿಲ್ಲದಿದ್ದರೆ ಪರಿಸ್ಥಿತಿ ಇಂತಹ ವಿಕೋಪಕ್ಕೆ ತಿರುಗುತ್ತಿರಲಿಲ್ಲ?... ನನ್ನ ಕ್ಷಮಿಸುತ್ತೀರಲ್ಲಾ? ನಿಮ್ಮನ್ನ ತುಂಬಾ ಸಂಕಟಕ್ಕೆ ಸಿಲುಕಿಸಿದೆ.. ನನ್ನ ಮೇಲೆ ನನಗೇ ಜಿಗುಪ್ಸೆಯಾಗುತ್ತಿದೆ..' ಒತ್ತಿಬಂದ ದುಃಖ ಮುಂದಿನ ಮಾತುಗಳನ್ನು ಅಸ್ಪಷ್ಟಗೊಳಿಸಿತು. ಮನದನ್ನೆಯ ಕಣ್ಣೀರಿನ ಪ್ರಭಾವಕ್ಕೆ ಯಾವ ಸುನಾಮಿಯೂ ಸಾಟಿಯಿಲ್ಲವೆಂದು ಕೇಳಿದ್ದೆ, ಈಗ ಅನುಭವವಾಗ್ತಿದೆ. ಮಂಡಿಯೂರಿ ಕುಳಿತು ಬಿಕ್ಕಳಿಸುತಿದ್ದ ಮಡದಿಯ ತಲೆಯನ್ನು ಮೃದುವಾಗಿ ನೇವರಿಸಿದೆ. ಕಾವ್ಯ ತನ್ನ ಅಶ್ರುಭರಿತ ನಯನಗಳಿಂದ ತನ್ನ ನೋಟದಲ್ಲೇ ಮತ್ತೊಮ್ಮೆ ನನ್ನ ಕ್ಷಮೆ ಕೋರಿದಳು. 'ಕಾವ್ಯಾ..ನಿನ್ನ ಕ್ಷಮಿಸಬಹುದು ಆದರೆಒಂದು ಷರತ್ತಿನೊಂದಿಗೆ..'



ನನ್ನ ಸೀರಿಯಸ್ ಮುಖಭಾವವನ್ನು ಕಂಡು, ಕಾವ್ಯ ಮತ್ತು ಶಾಂತಕ್ಕ ದುಗುಡದಿಂದ ಕೂಡಿದ ನೋಟ ಬೀರಿದರು. 'ನಿಮ್ಮೆಲ್ಲಾ ಷರತ್ತು ನನಗೆ ಒಪ್ಪಿಗೆ.. ನಾನು ಮಾಡಿದ್ದು ತಪ್ಪು ಅಂಥ ಗೊತ್ತು, ನಿಮ್ಮೆಲ್ಲರನ್ನು ಆತಂಕಕ್ಕೆ ಸಿಲುಕಿಸಿ, ನಿಮ್ಮನ್ನ ಲಾಕಪ್ ತಲುಪಿಸಿದ್ದು ಅಕ್ಷಮ್ಯ ಅಪರಾಧವೇ ಖಂಡಿತ'.

'ಹಾಗಾದರೆ ಇನ್ಮೇಲೆ ಭವಿಷ್ಯದ ಚಾನೆಲ್‌ಗಳನ್ನು ನೋಡಲ್ಲ ಅಂಥ.. ಹಾಗೂ ಯಾರಲ್ಲೂ ಭವಿಷ್ಯ ಕೇಳಲ್ಲ ಅಂಥ ಮಾತು ಕೊಡು'. ಕಾವ್ಯಳ ಮತ್ತು ಶಾಂತಕ್ಕನ ಆತಂಕ ಕರಗಿ ತಿಳಿ ಮಂದಹಾಸಕ್ಕೆ ಎಡೆಕೊಟ್ಟಿತು.